# ಅಭಿನಯವೇ ಉದ್ಯೋಗ

## ತೇಜಸ್ವಿನಿ ಶೇಖರ್

### ಝೀ ಕನ್ನಡ 'ಮಹಾದೇವಿ'ಯ ಮೇಘನಾ



★ *ಏನಾಗಬೇಕಿತ್ತು, ಏನಾದ್ರಿ?*

ನಮ್ಮದು ಹಾಸನ ಮೂಲ. ಮೈಸೂರಿನಲ್ಲಿ ನೆಲೆಸಿದ್ದೇವೆ. ನನ್ನ ತಂದೆ ಚಂದ್ರಶೇಖರ್ ವೃತ್ತಿಯಿಂದ ವೈದ್ಯರು. ಅವರಿಗೆ ನಾನೂ ವೈದ್ಯೆ ಆಗಬೇಕು ಎನ್ನುವ ಬಯಕೆ ಇತ್ತು. ಅದಕ್ಕಾಗಿ ಪಿಯುನಲ್ಲಿ ವಿಜ್ಞಾನಕ್ಕೆ ಸೇರಲು ತುಂಬಾ ಒತ್ತಾಯ ಮಾಡಿದರು. ನನಗೆ ಚಾರ್ಟರ್ಡ್ ಅಕೌಂಟೆಟ್ ಆಗಬೇಕು ಎನ್ನುವ ಕನಸಿತ್ತು. ಅದಕ್ಕೆ ವಾಣಿಜ್ಯ ವಿಭಾಗ ಆಯ್ಕೆ ಮಾಡಿಕೊಂಡೆ. ಬಿಕಾಂ ಮುಗಿಯುವ ಹೊತ್ತಿಗೆ ಫೇಸ್‌ಬುಕ್‌ನಿಂದ ಟಿವಿಗೆ ಅವಕಾಶ ಬಂತು. ಆಡಿಷನ್ ನೀಡಿದೆ. 'ಮಧುಬಾಲ'ದಲ್ಲಿ ಅಭಿನಯವನ್ನೂ ಮಾಡಿದೆ. ಆರಂಭದಲ್ಲಿ ತಂದೆಗೆ ಇದೂ ಇಷ್ಟ ಇರಲಿಲ್ಲ. ಕ್ರಮೇಣ ಅವರಿಗೂ ಇಷ್ಟ ಆಗಿದೆ. ತಾಯಿ ರೂಪಾ ಶೇಖರ್ ಎಲ್ಲಾ ಹಂತದಲ್ಲೂ ನನ್ನನ್ನು ಬೆಂಬಲಿಸುತ್ತಲೇ ಬಂದಿದ್ದಾರೆ. ನನ್ನಿಷ್ಟವೇ ಅವರ ಇಷ್ಟ ಕೂಡ.

ನಮ್ಮ ತಂದೆ ಟಿವಿಗೆ ವಿರೋಧಿಸಲು ತಮ್ಮದೇ ಆದ ಬೇರೆಯ ಕಾರಣಗಳಿದ್ದವು. ವೈದ್ಯೆಯಂತೂ ಆಗಲಿಲ್ಲ. ಐಎಎಸ್‌ಗಾದರೂ ತಯಾರಾಗು ಎನ್ನುವ ಒತ್ತಾಯ ಇತ್ತು. ನನ್ನದು ಏಕಮಾತ್ರ ಉದ್ದೇಶ ಸಿಎ ಮಾಡುವುದು. ನಾನು ಆ ಆಸೆಯನ್ನು ಇಟ್ಟುಕೊಂಡೇ ಬಣ್ಣ ಹಚ್ಚಿದ್ದೇನೆ. ಮದುವೆಯ ನಂತರವಾದರೂ ಮಾಡಬಹುದು ಎಂದು ಅಂದುಕೊಂಡಿದ್ದೇನೆ.

★ *ಮದುವೆಯ ನಂತರ ಬಣ್ಣಕ್ಕೆ ಬೈ ಬೈ ಹೇಳ್ತೀರಾ?*

ಮುಂದಿನದು ಗೊತ್ತಿಲ್ಲ. ಸದ್ಯ ಮದುವೆಯ ನಂತರ ನಟಿಸಬಾರದು ಎಂದುಕೊಂಡಿದ್ದೇನೆ. ಅಲ್ಲಿಯ ತನಕ ಒಳ್ಳೆಯ ಪಾತ್ರಗಳನ್ನು ಮಾಡಬೇಕು, ಬೆಳೆಯಬೇಕು. ನಂತರದ್ದು ನನ್ನ ಜೊತೆಗಾರರ ಸಹಕಾರದಿಂದ ನಿರ್ಧಾರ ಆಗುತ್ತದೆ. ಈಗ ಸದ್ಯ ನಾನು ಇದನ್ನು ಉದ್ಯೋಗದಂತೆಯೇ ತೆಗೆದುಕೊಂಡಿದ್ದೇನೆ. ಅದೂ ತುಂಬಾ ಇಷ್ಟಪಟ್ಟು ಖುಷಿಯಿಂದ ಮಾಡುತ್ತಿದ್ದೇನೆ. ಬಾಲ್ಯದಿಂದಲೂ ಪ್ರತಿಭಾವಂತ ವಿದ್ಯಾರ್ಥಿ. ಓದುವುದು ನನ್ನ ಆಸಕ್ತಿಯ ವಿಷಯ. ಹಾಗಾಗಿ ಶಿಕ್ಷಣವನ್ನು ಮುಂದುವರಿಸಬೇಕು, ಸಿಎ ಮಾಡಬೇಕು ಎಂದುಕೊಂಡಿದ್ದೇನೆ. ಕಾಲ ಎಲ್ಲದನ್ನೂ ನಿಭಾಯಿಸುತ್ತದೆ.

★ *ಸ್ಫುಟವಾದ ಮಾತು ಮತ್ತು ನಟನೆ ಕಲಿತಿದ್ದು ಹೇಗೆ?*

ನನ್ನ ಓದು ನನ್ನ ಮಾತನ್ನು ರೂಪಿಸಿದೆ ಎನ್ನಬಹುದು. ಆಟಕ್ಕಿಂತಲೂ ಪಾಠಕ್ಕೆ ಪ್ರಾಮುಖ್ಯತೆ ಕೊಟ್ಟವಳು ನಾನು. ಅದೇ ವೇದಿಕೆ, ಸಂದರ್ಶನ– ಕ್ಯಾಮೆರಾ ಎದುರು ಅಂದರೆ ಎದೆ ಒಡೆದು ಹೋಗುತ್ತದೆ. ತುಂಬಾ ಕಷ್ಟ ಆಗುತ್ತದೆ. ಸಂದರ್ಭವನ್ನು ಹೇಗೆ ನಿರ್ವಹಿಸಬೇಕು ಎಂದುಕೊಂಡಿದ್ದೆಲ್ಲಾ ಕ್ಯಾಮೆರಾ ಕಂಡ ಕೂಡಲೇ ತಲೆಕೆಳಗಾಗಿ ಬಿಡುತ್ತದೆ. ಪಟ ಪಟ ಮಾತಾಡಿ ಬಿಡುತ್ತೇನೆ. ಒಳ್ಳೆಯ ಭಾಷಣಕಾರರ ಮಾತುಗಳನ್ನು ಕೇಳಿದಾಗ ನಾನೂ ಹೀಗೆ ನಿಧಾನವಾಗಿ, ನಿಖರವಾಗಿ ಮಾತನಾಡಬೇಕು. ಕೇಳುಗರ ಮನದಾಳದಲ್ಲಿ ಮಾತು ನಾಟಬೇಕು ಎಂದು ಅನ್ನಿಸುತ್ತದೆ. ಆ ಸಂದರ್ಭ ಬಂದಾಗ ಸ್ಪೀಡಾಗಿ ಪದ್ಯವನ್ನು ಒಪ್ಪಿಸಿದಂತೆ ಮಾತನಾಡಿಬಿಡುತ್ತೇನೆ.

★ *ಶಾಪಿಂಗ್ ಬಗ್ಗೆ ಹೇಳಿ?*

ಶಾಪಿಂಗ್ ತುಂಬಾನೇ ಮಾಡುತ್ತೇನೆ. ಹಿಂದಿನಂತೆ ಅಲೆದಾಡಿ ಮಾಡುವುದಿಲ್ಲ. ಕುಳಿತಲ್ಲೇ ಚಂದದ ಬಟ್ಟೆ– ವಸ್ತುಗಳನ್ನು ತೆಗೆದುಕೊಳ್ಳುತ್ತೇನೆ. ಇ ಶಾಪಿಂಗ್‌ನಿಂದ ತುಂಬಾ ಸಹಾಯವಾಗಿದೆ. ಎಷ್ಟೋ ಸಂದರ್ಭದಲ್ಲಿ ಬಿಡುವೇ ಇರುವುದಿಲ್ಲ. ಯಾವುದೋ ಸಭೆ– ಸಮಾರಂಭಕ್ಕೆ ಹೊಸ ಬಟ್ಟೆ ತೆಗೆದುಕೊಳ್ಳೋಣ ಎಂದರೆ ಆಗುವುದಿಲ್ಲ. ಈ ಕಾರಣಕ್ಕೆ ಆನ್‌ಲೈನ್ ಶಾಪಿಂಗ್ ತುಂಬಾ ಇಷ್ಟ. ಟ್ರಾಫಿಕ್ ಕಿರಿ ಕಿರಿ ಇಲ್ಲದೆ ಸಮಯವನ್ನು ಉಳಿಸಬಹುದು. ಆದರೆ ಇದರಿಂದ ತೊಂದರೆಗಳೂ ಉಂಟು. ಸೈಜಿನಲ್ಲಿ ವ್ಯತ್ಯಾಸ ಕಂಡುಬರುತ್ತದೆ. ಬಣ್ಣದಲ್ಲೂ ವ್ಯತ್ಯಾಸ ಕಾಣಬಹುದು. ಇದಕ್ಕೆ ಬದಲಾವಣೆ ಮಾಡಿಸಿಕೊಳ್ಳಬಹುದು. ಕೆಲವೊಮ್ಮೆ ಅದರ ಗುಣಮಟ್ಟವೇ ಇಷ್ಟ ಆಗದೇ ಇರಬಹುದು. ಇದೇ ಕಾರಣಕ್ಕೆ ನಾನು ಇಷ್ಟಪಟ್ಟು ತೆಗೆದುಕೊಂಡ ಕೆಲವು ಬಟ್ಟೆಗಳು ಒಂದು ಸಾರಿಯೂ ಹಾಕದೆ ಕಪಾಟು ಸೇರಿಸಿದ್ದೇನೆ. ಗುಡ್ಡೆಯಾದ ಮೇಲೆ ಬೇರೆಯವರಿಗೆ ಕೊಟ್ಟಿದ್ದೇನೆ.

★ *ಊಟೋಪಚಾರ ಹೇಗಿದೆ?*

ಡಯಟ್ ತಂಟೆಗೆ ಹೋಗುವುದಿಲ್ಲ. ಇಷ್ಟ ಇದ್ದಿದ್ದೆಲ್ಲಾ ತಿನ್ನುತ್ತೇನೆ. ಎಷ್ಟೇ ತಿಂದರೂ ದಪ್ಪ ಆಗುವುದಿಲ್ಲ. ಮೊಟ್ಟೆಯ ವಿವಿಧ ಅಡುಗೆ ಅಂದರೆ ನನಗೆ ಪ್ರಾಣ. ಅಡುಗೆ ಮಾಡುವುದರಲ್ಲಿಯೂ ಹೊಸ ಹೊಸ ಪ್ರಯೋಗವನ್ನು ಮಾಡುತ್ತೇನೆ. ಸಾಮಾನ್ಯವಾಗಿ ನಾನು ಮಾಡಿದ್ದು ಎಂದೂ ಕೆಟ್ಟಿಲ್ಲ. ತುಂಬಾ ಚೆನ್ನಾಗಿ ಮಾಡುತ್ತೇನೆ.

★ *ನಟನಾ ಪಯಣ ಹೇಗಿದೆ?*

ಇಲ್ಲಿಗೆ ಬಂದು ಎರಡು ಮೂರು ವರ್ಷಗಳಾದವು. ಇದುವರೆಗೆ ಒಮ್ಮೆಯೂ ಬೇಸರ ಅನ್ನಿಸಿಲ್ಲ. ಕನ್ನಡದ ಎರಡು ಧಾರಾವಾಹಿಗಳಾದ ಮೇಲೆ ತಮಿಳು– ತೆಲುಗಿನಲ್ಲಿ ಅವಕಾಶ ಸಿಕ್ಕು. ಹೈದ್ರಾಬಾದ್– ಚೆನ್ನೈ ಎಂದು ಓಡಾಡುವುದರಲ್ಲಿ ಸುಸ್ತಾಗಿ ಬಿಟ್ಟೆ. ಅದೇ ಹೊತ್ತಿಗೆ 'ಮಹಾನದಿ'ಗೆ ಕರೆ ಬಂತು. ಹಾಗಾಗಿ ಅವುಗಳನ್ನು ಬಿಟ್ಟೆ.

■ ರಾಗು